# ಲೌಕಿಕ ಬಲಿದಾನ ಮರಣಕ್ಕೆ ವಚನಕಾರರ ಪ್ರತಿಕ್ರಿಯೆ

***Dr.Gundanna.C.Kalaburgi**

ಹನ್ನೆರಡನೆಯ ಶತಮಾನದಲ್ಲಿ ವಚನಕಾರರು ವೈಚಾರಿಕ ಚಳುವಳಿ ಮಾಡಿದರು. ಈ ಮೂಲಕ ಜನ ಸಾಮಾನ್ಯರಲ್ಲಿ ವೈಚಾರಿಕತೆಯ ಬೀಜ ಬಿತ್ತಿದರು. ಇವರು ವೀರಶೈವ ಧರ್ಮ ಕೇಂದ್ರಿತವಾಗಿ ತಮ್ಮ ವಚನಗಳ ಮೂಲಕ ಭಕ್ತಿ, ಕರ್ಮ, ಜ್ಞಾನ ಮಾರ್ಗಗಳ ಮೂಲಕ ಮುಕ್ತಿ ಸಂಪಾದನೆ ಮಾಡಿಕೊಳ್ಳುವ ಮಾರ್ಗಗಳನ್ನು ತಿಳಿಸಿದರು. ವೀರಶೈವ ಧರ್ಮದ ತತ್ವ ಸಂದೇಶಗಳನ್ನು ಪ್ರಸಾರ ಮಾಡುವ ಮೂಲಕ ಅವರನ್ನು ಸುಜ್ಞಾನದತ್ತ ಕೊಂಡೊಯ್ದರು. ವಚನಕಾರರು ಶರಣರು ಎಂಬ ಧಾರ್ಮಿಕ ವರ್ಗವನ್ನು ನಿರ್ಮಾಣ ಮಾಡುವ ಮೂಲಕ ಅವರನ್ನು ಸಜ್ಜನರಾಗಿಸಿ ಸಂಘಗಳನ್ನು ನಿರ್ಮಾಣ ಮಾಡಿದರು. ಅದರ ಮೂಲಕ ಸಮಾಜದ ಅಂತರಂಗ, ಬಹಿರಂಗ ಶುದ್ಧಿಯನ್ನು ಸಾಧಿಸಿದರು. ವಚನಕಾರರು ವೈಯಕ್ತಿಕವಾಗಿ ಯಾವುದೇ ಅಹಂಕಾರ ಹೊಂದದೆ ನಾವು ನಮ್ಮವರು ಎಂಬ ಮನೋಭಾವ ನಿರ್ಮಾಣ ಮಾಡಿದರು. ಅಲ್ಲದೆ ಇವನಾರವ ಎನ್ನದೆ? ಇವನಮ್ಮವ ಎನ್ನುವ ವಿಶ್ವವಿಶಾಲ ಹೃದಯದ ಮನೋಭಾವವನ್ನು ಅಂದಿನ ಸಮಾಜದಲ್ಲಿ ನಿರ್ಮಾಣ ಮಾಡಿದರು. ಅಂದಿನ ಸಮಾಜದಲ್ಲಿದ್ದ ಮೇಲು–ಕೀಳು, ಶ್ರೇಷ್ಠ–ಕನಿಷ್ಠ, ಉಚ್ಚ–ನೀಚ, ಒಡೆಯ–ಕಾರ್ಮಿಕ, ಬಡವ–ಶ್ರೀಮಂತ ಎಂಬ ಶೋಷಣೆಯ ಮನೋಭಾವದ ಇಂತಹ ಸಾಮಾಜಿಕ ಸ್ತರಗಳನ್ನು ದೂರ ಮಾಡುವ ಮೂಲಕ 'ಮಾನವ ಕುಲವೊಂದೇ' ಎಂಬ ವಿಚಾರವನ್ನು ಸಾರಿದರು. ಧರ್ಮ ಮಾರ್ಗದ ಮೂಲಕ ಸಾಮಾಜಿಕ ಸುಧಾರಣೆ ಬಯಸಿದ ಅವರು 'ಲಿಂಗ'ವೆಂಬ ಅಮೂಲ್ಯ ವಸ್ತುವನ್ನು ಭಕ್ತರ ಕೈಗೆ ನೀಡುವ ಮೂಲಕ 'ಅಂಗ–ಲಿಂಗ' ಸಂಬಂಧದಲ್ಲಿ ಧರ್ಮ ನಿಷ್ಠೆಯನ್ನು ಹೆಚ್ಚಿಸಿದರು. ಈ ಮೂಲಕ ಅವರನ್ನು ಸಮಾಜ ನಿಷ್ಠುರರನ್ನಾಗಿ ಮಾಡಿದರು. ಹಾಗೆಯೇ 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ"[1] ಎನ್ನುವ ಮೂಲಕ ಕುಟುಂಬದಲ್ಲಿ ಪತಿ–ಪತ್ನಿ ನಿಷ್ಠೆಯನ್ನು ಹೆಚ್ಚಿಸಿದ ಕೀರ್ತಿ ವಚನಕಾರರರಿಗೆ ಸಲ್ಲುತ್ತದೆ. ಅಂದಿನ ಕಾಲದಲ್ಲಿ ವಚನಕಾರರು ವ್ಯಕ್ತಿತ್ವದ ಪರಿಶುದ್ಧತೆಗೆ ಹೆಚ್ಚು ಮಹತ್ವ ನೀಡಿ 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡಾ'[2] ಎನ್ನುವ ಮೂಲಕ ವ್ಯಕ್ತಿತ್ವದ ಪರಿಶುದ್ಧತೆಯಿಂದ ಸಾಮಾಜಿಕ ಪರಿಶುದ್ಧತೆಯನ್ನು ಸಾಧಿಸಿದರು. ಒಟ್ಟಾರೆ ವಚನಕಾರರು ಅಂದಿನ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯ ಸರ್ವ ಜನ ಸಮುದಾಯಗಳ ಉದ್ಧಾರವನ್ನು ಬಯಸಿ ಸಾಮಾಜಿಕ ಬದಲಾವಣೆಯ ಆಶಯದ ಹೊಸ ಭರವಸೆಗಳನ್ನು ನಿರ್ಮಾಣ ಮಾಡಿ ಜನಸಾಮಾನ್ಯರ ಬದುಕನ್ನು ತಿದ್ದಿ ತೀಡಿದರು. ಅವರಲ್ಲಿ ಹೊಸ ಬದುಕಿನ ಚೈತನ್ಯವನ್ನು ನೀಡಿ ಹೊಸ ನಂಬಿಕೆ, ಮೌಲ್ಯ, ಆಚರಣೆಗಳನ್ನು ನಿರ್ಮಾಣ ಮಾಡಿದರು. ಹಳೆಯ ಅನಿಷ್ಟ ಪದ್ಧತಿ ಸಂಪ್ರದಾಯಗಳನ್ನು ತಮ್ಮ ವಿಚಾರಧಾರೆಗಳ ಮೂಲಕ ನಿಷ್ಕರ್ಷಿಸಿದರು. ಮೂಢನಂಬಿಕೆಯನ್ನು ಜನರ ಬದುಕಿನಿಂದ ದೂರಮಾಡಿ ಅವರನ್ನು ಅದರಿಂದ ವಿಮುಕ್ತರನ್ನಾಗಿ ಮಾಡಿದರು. ವಚನಕಾರರೆಲ್ಲ ಒಟ್ಟಾಗಿ ಇಂತಹವುಗಳ ವಿರುದ್ಧ ಹೋರಾಟ ಮಾಡಿ ವೈಚಾರಿಕತೆಯ ಹೊಳೆಯನ್ನು ಹರಿಸಿ ಕೀರ್ತಿಯನ್ನು ಪಡೆದರು.

ವಚನಕಾರರು ಸ್ವ ಅನುಭವದಿಂದ ವಚನಗಳನ್ನು ರಚನೆ ಮಾಡುವುದರ ಮೂಲಕ ಸೃಷ್ಟಿ, ಪರವಸ್ತು, ಶಿವಲಿಂಗ, ದೇವರು, ಕೃಪೆ, ಗುರುಕಾರುಣ್ಯ ದಾನ, ಧ್ಯಾನ, ಗುರು, ಶಿಷ್ಯ, ಸ್ಥಾವರಲಿಂಗ, ಇಷ್ಟಲಿಂಗ, ಭಕ್ತ, ಜಂಗಮ, ಸತ್ಯ, ಅಸತ್ಯ, ಹಿಂಸೆ, ಅಹಿಂಸೆ, ಮೃದು ವಚನ, ವಿನಯ, ಕಾಯಕ, ದಾಸೋಹ, ಸದ್ಭಕ್ತಿ, ಭವಿ, ಜಾತಿ, ಕುಲ, ಶೀಲ, ಜಪ, ತಪ, ವ್ರತ, ಉಪವಾಸ, ತೀರ್ಥ ಕ್ಷೇತ್ರ ಪ್ರಾಣಲಿಂಗ, ಪ್ರಸಾದ, ಯೋಗ, ಸಾಮರಸ್ಯಗಳೆಂಬ ಮೊದಲಾದ ವಿಷಯಗಳ ವಿಚಾರಗಳನ್ನು ಜನತೆಗೆ ಬೋಧಿಸಿದರು. ಈ ಮೂಲಕ ಜನತೆಯಲ್ಲಿ ಪರಿಶುದ್ಧ ಬದುಕನ್ನು ನಿರ್ಮಾಣ ಮಾಡಿ ಪರಿಶುದ್ಧ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದರು.

ಕನ್ನಡ ಸಾಹಿತ್ಯ ಸಂಸ್ಕೃತಿಗಳು ವೈವಿಧ್ಯತೆಯನ್ನು ಪಡೆದಿವೆ. ಈ ವೈವಿಧ್ಯತೆಗಳು ಹಿಂದಿನ ಕಾಲದಲ್ಲಿ ಜನರು ಅನುಸರಿಸಿದ ಆದರ್ಶ, ಮೌಲ್ಯಗಳ ಕಾರಣಗಳಿಂದ ನಿರ್ಮಾಣವಾಗಿವೆ. ಪ್ರಾಚೀನವಾಗಿ ಕರ್ನಾಟಕ ಜನತೆಯಲ್ಲಿ ಕಂಡು ಬಂದ ವೈವಿಧ್ಯಾತ್ಮಕ ಮೌಲ್ಯ ಆದರ್ಶಗಳಲ್ಲಿ ಮಹಾಮರಣವು ಪ್ರಮುಖವಾದುದಾಗಿದೆ. ಈ ಮಹಾಮರಣ ಮೌಲ್ಯವು ಮರಣದ ವಿಚಾರದಲ್ಲಿ ಹಿಂದಿನ ಜನತೆ ಅನುಸರಿಸಿದ ವಿಶಿಷ್ಟ ಸಂಪ್ರದಾಯ ಆದರ್ಶಗಳನ್ನು ತಿಳಿಸುವ ಪರಿಕಲ್ಪನೆಯಾಗಿದೆ. ಈ ಮಹಾಮರಣ ಪರಿಕಲ್ಪನೆಯಲ್ಲಿ ಲೌಕಿಕ ಕವಿಗಳು ಹೇಳಿದಂತೆ ವೀರಮರಣ, ಬಲಿದಾನಮರಣ ಸೇರಿದ್ದು ಹಲವಾರು ಬಗೆಯ ಧಾರ್ಮಿಕ ಮರಣಗಳು ಇದರಲ್ಲಿ ಸೇರಿವೆ. ಇಂತಹ ಮರಣಗಳು ಅಂದಿನ ಜನರಲ್ಲಿ ವಿಶಿಷ್ಟವಾದ ಮನೋಭಾವದಲ್ಲಿ ನಡೆದುಕೊಂಡು ಬಂದ ಆಚರಣೆಗಳಾಗಿವೆ. ಈ ಮರಣ ಆಚರಣೆಯು ಲೌಕಿಕವಾಗಿ ಕೀರ್ತಿಯ ಮೇಲಿನ ಆಸೆಯಿಂದ ನಡೆದುಕೊಂಡು ಬಂದಿದ್ದು ಧಾರ್ಮಿಕವಾಗಿ ಇಂತಹ

ಮರಣ ಸಂಪ್ರದಾಯಗಳು ಹರಕೆ ತೀರಿಸುವ ಮನೋಭಾವದಲ್ಲಿ ನಡೆದುಕೊಂಡು ಬಂದಿವೆ. ವೀರಸೈನಿಕನೊಬ್ಬ ರಾಜನಿಗೆ ಸೇವೆಯನ್ನು ಸಲ್ಲಿಸುವ ಭಾವನೆಯಲ್ಲಿ, ರಾಜಾಜ್ಞೆಯನ್ನು ಪಾಲಿಸುವ ಬಗೆಯಲ್ಲಿ ಲೌಕಿಕ ಮರಣಗಳು ನಡೆದುಕೊಂಡು ಬಂದಿವೆ. ಇಂತಹ ಆಚರಣೆಗಳು, ಜನತೆಯ ಭಾವನೆಯಲ್ಲಿ ವಿಶಿಷ್ಟವೆನಿಸಿ 'ಮಹಾಮರಣ'ಗಳೆನ್ನಿಸಿಕೊಂಡಿವೆ. ಇಂತಹ ಮರಣಗಳು ಪ್ರಾಚೀನ ಕಾಲದಿಂದಲು ಕರ್ನಾಟಕದಲ್ಲಿ ಹಲವಾರು ಬಗೆಯಲ್ಲಿ ನಡೆದುಕೊಂಡು ಬಂದಿವೆ. ಲೌಕಿಕ ಕಾವ್ಯಗಳು ಈ ಬಗೆಯ ಮರಣಗಳನ್ನು ಪೆಣ್ಬುಯ್ಯಲ್, ತುರುಗೋಳ್, ಯುದ್ಧ ವೀರಮರಣ ಸೇರಿದಂತೆ ಆಳ್ತನದ ಸೇವೆಯಲ್ಲಿ ನಡೆಯುವ ಜೋಳವಾಟಿ, ವೇಳೆವಾಟಿ, ಲೆಂಕವಾಟಿ, ಗರುಡರು, ಕೀಳ್ಗುಂಟೆ ಎಂಬ ಮೊದಲಾದ ಮರಣ ಪ್ರಕಾರಗಳನ್ನು ಮಹಾಮರಣ ಪದ್ಧತಿಗಳಲ್ಲಿ ಗುರುತಿಸಿದ್ದು ಇವೆಲ್ಲ ಮಹಾಮರಣ ಸಂಪ್ರದಾಯಗಳಾಗಿವೆ.

ಈ ಮಹಾಮರಣಗಳೆಲ್ಲ ಮುಖ್ಯವಾಗಿ ಲೌಕಿಕ, ಆಗಮಿಕ ಕಾವ್ಯ ಪರಂಪರೆಯಲ್ಲಿ ಚರ್ಚೆಯಾಗಿವೆ. ಆದರೆ ಈ ಮರಣ ಮೌಲ್ಯಗಳನ್ನು ವಚನಕಾರರು ಮಧ್ಯಕಾಲೀನ ಸಂದರ್ಭದಲ್ಲಿ ಭಿನ್ನವಾಗಿ ಚರ್ಚೆ ಮಾಡಿದ್ದಾರೆ. ಪ್ರಾಚೀನ ಕಾಲದಲ್ಲಿ ರಾಜ ವ್ಯವಸ್ಥೆಯ ಸೇವಕತನದಲ್ಲಿ ನಡೆಯುವ ಬಲಿದಾನ ಮರಣಗಳನ್ನು ವಚನಕಾರರು ಶೋಷಣೆಯ ರೂಪಗಳಾಗಿ ನೋಡುತ್ತಾರೆ. ಈ ಮೂಲಕ ಅವರು ರಾಜವ್ಯವಸ್ಥೆಯನ್ನು ಧಿಕ್ಕರಿಸಿ ವಚನಗಳನ್ನು ಬರೆಯುವುದರ ಮೂಲಕ ಅಂತಹ ಮರಣ ಪದ್ಧತಿಗಳನ್ನು ತಿರಸ್ಕರಿಸಿದ್ದಾರೆ. ಹಾಗೆಯೇ ವಿವೇಕ ಮತ್ತು ವಿವೇಚನೆಗಳಿಂದ ಭಿನ್ನವಾದ ಮರಣ ಪದ್ಧತಿಗಳನ್ನು ಸ್ವೀಕಾರ ಮಾಡಿಕೊಳ್ಳುವ ಮೂಲಕ ಮಹಾಮರಣ ಮರಣ ಸಂಪ್ರದಾಯಗಳನ್ನು ವೈಚಾರಿಕ ಮನೋಭಾವದಲ್ಲಿ ಚಿಂತನೆ ಮಾಡಿದ್ದಾರೆ. ಹೀಗೆ ಮರಣದ ಬಗ್ಗೆ ಚಿಂತನೆ ಮಾಡುವ ವಚನಕಾರರು ಮರಣಕ್ಕೆ ಅಂಜಿದವರಲ್ಲ ಅಳುಕಿದವರಲ್ಲ ಅವರು ಮರಣ ಬಂದಾಗ ಅದನ್ನು ಮುಕ್ತವಾಗಿ ಸಂಭ್ರಮದಿಂದ ಸ್ವೀಕರಿಸಿದವರು. ಇವರು ಮರಣದ ವಿಚಾರದಲ್ಲಿ 'ಆಯುಷ್ಯ ತೀರಿದಲ್ಲದೆ ಮರಣವಿಲ್ಲ,'[3] ಎಂಬ ನಂಬಿಕೆ ಹೊಂದಿದವರು. ಕಾಯಕ್ಕೆ ಅಂಜಿ ಬದುಕಿದ ಇವರು ಕಾಯದ ರಕ್ಷಣೆಗಾಗಿ ಯಾರನ್ನು ಬೇಡಿದವರಲ್ಲ ತಮ್ಮ ಜೀವನದಲ್ಲಿ

ಪ್ರಾಚೀನವಾಗಿ ಕರ್ನಾಟಕದಲ್ಲಿ ಶತ್ರುಗಳು ಗೋವುಗಳನ್ನು ಅಪಹರಣ ಮಾಡಿ ಕದ್ದೊಯ್ದಂತೆ ಸ್ತ್ರೀಯರನ್ನು ಅಪಹರಣ ಮಾಡಿ ಮಾನಭಂಗಗೊಳಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಸ್ತ್ರೀಯರನ್ನು ರಕ್ಷಣೆ ಮಾಡಲು ವೀರರು ಮಧ್ಯಪ್ರವೇಶಿಸಿ ಶತ್ರುಗಳು ದಾಳಿಕೋರರೊಂದಿಗೆ ಹೋರಾಡಿ ವೀರ ಮರಣ ಪಡೆಯುತ್ತಿದ್ದರು. ಆದರೆ ಆ ಕಾಲದಲ್ಲಿ ಇದು ಸ್ತ್ರೀಯರಿಗೆ ಗೌರವ ಸೂಚಿಸದೆ ಅವರನ್ನು ಕೆಟ್ಟ ನಡತೆಯಲ್ಲಿ ಕಾಣುವ ಸಂದರ್ಭವನ್ನು ತಿಳಿಸುತ್ತದೆ. ವಚನಕಾರರು ಸರ್ವರಿಗೂ ಸಮಪಾಲು. ಸರ್ವರಿಗೂ ಸಮಬಾಳು ಎನ್ನುವ ತತ್ವದಲ್ಲಿ ಸ್ತ್ರೀ ಪುರುಷ ಎಂಬ ಭೇದಭಾವಗಳಿಲ್ಲದೆ ಅಂದಿನವರೆಗೂ ಸಮಾಜದಲ್ಲಿ ಇದ್ದ ಅಸಮಾನತೆಯನ್ನು ಹೊಡೆದೋಡಿಸಿ ಸ್ತ್ರೀಯರಿಗೆ ಸಾಮಾಜಿಕವಾಗಿ, ಧಾರ್ಮಿಕವಾಗಿ ಸಿಗಬೇಕಾದ ಗೌರವವನ್ನು ತಂದುಕೊಟ್ಟರು. ಯುದ್ಧದ ಮನೋಭಾವದಲ್ಲಿ ಸ್ತ್ರೀರಕ್ಷಣೆಗೋಸ್ಕರ ಪ್ರಾಣ ಹತ್ಯೆಗಳು ನಡೆಯುವುದನ್ನು ವಿರೋಧಿಸಿದ ವಚನಕಾರರು 'ಪರಸ್ತ್ರೀ ಪರಧನವೆಂಬೀ ಜೂಜಿಂಗಂಜುವೆನಯ್ಯ'[28] ಎಂದು ಹೇಳುವ ಮೂಲಕ ಸ್ತ್ರೀಯರ ಬಗ್ಗೆ ಗೌರವ ತಾಳಿದರು. 'ಛಲಬೇಕು ಶರಣಂಗೆ ಪರಸತಿಯ ನೊಲ್ಲೆಂಬ![29] ಎಂಬ ಆದರ್ಶವನ್ನು ಹೇಳುವ ಮೂಲಕ ಪರರ ಹೆಣ್ಣಿಗಾಗಿ ಆಸೆ ಪಡುವ ಸ್ತ್ರೀವ್ಯಾಮೋಹದ ಮನೋಭಾವನೆಗಳನ್ನು ತಿದ್ದುವ ಪ್ರಯತ್ನ ಮಾಡಿದರು. ಈ ಮೂಲಕ ಸ್ತ್ರೀಯರಿಗೆ ಒಂದು ವ್ಯಕ್ತಿತ್ವವಿದೆ ಅವರಿಗೂ ಸಮಾನವಾದ ಅವಕಾಶಗಳು ದೊರೆಯ ಬೇಕೆಂದು ಹೇಳುವ ಮೂಲಕ ಸ್ತ್ರೀಯ ವ್ಯಕ್ತಿತ್ವಕ್ಕೊಂದು ಘನತೆಯನ್ನು ತಂದು ಕೊಟ್ಟು ಸಮಾಜ ಸುಧಾರಣೆ ಮಾಡಿದರು. ಅಂದಿನ ಸಮಾಜದಲ್ಲಿದ್ದ ಕಾಮ ಕೇಂದ್ರಿತ ಮನಸ್ಸುಗಳನ್ನು ಪರಿವರ್ತನೆ ಮಾಡುವಲ್ಲಿ **'ತೊರೆಯ ಮೀವ ಅಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ, ತೊರೆಯಿಂ ಬೋ, ತೊರೆಯಿಂ ಬೋ, ಪರನಾರಿಯ ಸಂಗವ ತೊರೆಯಿಂ ಬೋ'!**[30] ಎಂದು ಸಾರುವ ಮೂಲಕ ಸಾಮಾಜಿಕ ಪರಿಶುದ್ಧತೆಯನ್ನು ನಿರ್ಮಾಣ ಮಾಡಿದರು. ಬಸವಣ್ಣ ತಮ್ಮ ಒಂದು ವಚನದಲ್ಲಿ ಪ್ರಾಚೀನವಾಗಿ ನಡೆದುಕೊಂಡು ಬಂದ ಸ್ತ್ರೀ ಅಪಹರಣಗಳನ್ನು ವಿರೋಧಿಸುವ ಬಗೆಯಲ್ಲಿ

**ಅಸುರನೈಶ್ವರ್ಯವ ನೆನೆಸುವಡೆ**
**ಸೀತೆಗೆ ಸಿರಿಮಿಗಿಲೆನಿಪ ಸತಿಯರೆಂಟು ಕೋಟಿ!**
**ಮತಿವಂತ ಶಿರ; ಪ್ರಧಾನರೆಂಟು ಕೋಟಿ!**
**ಲೆಕ್ಕವಿಲ್ಲದ ದಳವು! ಲಕ್ಷ ಕುಮಾರರು !**
**ದಿಕ್ಪಾಲಕರವನ ಮನೆಯ ಬಂಧನದಲಿಪ್ಪರು!**
**ಸುರ ಸತಿಯರನೆಲ್ಲರನಾತೆ ಸೆರೆ ಮಾಡಿಯಾಳಿದ**
**ಶಿವನೇ ನೀ ಕರುಣಿಸಿದಂತಿರದೆ**
**ಪರವಧುವಿನ ಬೇಟದವನ ಪ್ರಾಣಕೊಂಡಿತ್ತು**
**ಗರುಡ ಕಂಡ ಸರ್ಪ ಧರೆಗಿಳಿದಂತೆ ಅಡಗಿಪ್ಪೆನಯ್ಯ**
**ಕೂಡಲಸಂಗಮ ದೇವ!**[31]

ಎಂದು ಸ್ತ್ರೀಯರ ರಕ್ಷಣೆಗೆ ಸಾಕ್ಷಾತ್ ಶಿವನೇ ಇದ್ದಾನೆ. ಆದರೆ ಆ ಪರಶಿವನು ಕರುಣಿಸಿದಂತೆ ನಾವು ಬದುಕನ್ನು ಸಾಗಿಸಬೇಕು. ಅದು ಬಿಟ್ಟು ಪರಸ್ತ್ರೀಯ ಸಂಗವನ್ನು ಬಯಸಿ ಹೋದರೆ ಪ್ರಾಣವನ್ನು ತೆರಬೇಕಾಗುತ್ತದೆ ಎಂದು ಹೇಳುವ ಮೂಲಕ ಐತಿಹಾಸಿಕವಾಗಿ ಸೀತೆಯ ಅಪಹರಣದಲ್ಲಿ ರಾವಣನ ತಲೆದಂಡವಾದುದನ್ನು ನೆನಪಿಸುವ ಈ ವಚನ ಸ್ತ್ರೀ ರಕ್ಷಣೆಯ ಆದರ್ಶ ಮೌಲ್ಯವನ್ನು ಹೇಳಿದೆ. ಅಲ್ಲದೆ ಸ್ತ್ರೀಯ ಮಾನರಕ್ಷಣೆ ಮತ್ತು ಅಪಹರಣ ಕಾರಣವಾಗಿ ನಡೆಯುವ ಯುದ್ಧಗಳಲ್ಲಿ ಪರಸ್ಪರ ಶತ್ರುಗಳ ಹೋರಾಟದಲ್ಲಿ ಆಗುವ ಮರಣ, ಜೀವಹತ್ಯೆಗಳನ್ನು ವಿರೋಧಿಸುವಂತಹ ನೆಲೆಯಲ್ಲಿ ಮಧ್ಯಕಾಲೀನ ಸಂದರ್ಭದಲ್ಲಿ ವಿಭಿನ್ನವಾದ ಆದರ್ಶ ಮೌಲ್ಯಗಳನ್ನು ವಚನಕಾರರು ನಿರ್ಮಾಣ ಮಾಡಿಕೊಂಡು ಬಂದಿದ್ದಾರೆ.

**ಜೋಳವಾಳಿ ಮರಣ**

ಇದು ಹಿಂದಿನ ಕಾಲದ ರಾಜವ್ಯವಸ್ಥೆಯಲ್ಲಿ ನಡೆಯುತ್ತಿದ್ದ ಬಲಿದಾನ ಮರಣವಾಗಿದೆ. ರಾಜನಾದವನು ತಮ್ಮ ವೀರಸೈನಿಕರಿಗೆ ಅನ್ನವನ್ನಿಟ್ಟು ಸಾಕಿ ಸಲವುತ್ತಿದ್ದನು. ಈ ಕಾರಣದಿಂದ ರಾಜನ ಪರವಾಗಿ ಶತ್ರುಗಳೊಂದಿಗೆ ಹೋರಾಟ ಮಾಡುತ್ತಾ ವೀರ ಸೈನಿಕರು ಸಾಯುವುದು 'ಜೋಳವಾಳಿ' ಸಂಪ್ರದಾಯವಾಗಿದೆ. ಜೋಳವಾಳಿಗಳು ಒಡೆಯನು ನೀಡಿದ ಜೋಳ, ಅನ್ನಕ್ಕೆ ಪ್ರತಿಯಾಗಿ ದೇಹವನ್ನು ನೀಡಿ ಉಪಕೃತರಾಗುವ ಪದ್ಧತಿಯಾಗಿದೆ. ಇಲ್ಲಿ ಜೋಳವಾಳಿಗಳು ಒಡೆಯನಿಗೆ ಆಪತ್ತುಗಳು ಬಂದಾಗ ಅವನ ಪರವಾಗಿ ನಿಂತು ಹೋರಾಡುತ್ತಾ ಮಡಿದರೆ ಸ್ವರ್ಗ ಪ್ರಾಪ್ತವಾಗುತ್ತದೆ ಎಂದು ನಂಬಿದ್ದರು. ಮಧ್ಯಕಾಲೀನ ಸಂದರ್ಭದಲ್ಲಿ ವಚನಕಾರರು ರಾಜವ್ಯವಸ್ಥೆಯ ಊಳಿಗತನದಲ್ಲಿ ಇಂತಹ ಆಚರಣೆಗಳು ನಡೆದುಕೊಂಡು ಬರಲು ಕಾರಣವಾದ ರಾಜವ್ಯವಸ್ಥೆಯನ್ನು ದಿಕ್ಕರಿಸುವ ಮೂಲಕ ವಿರೋಧಿಸುತ್ತಾರೆ. ಜೋಳವಾಳಿ, ವೇಳೆವಾಳಿ, ಲೆಂಕವಾಳಿ ಸಂಬಂಧಗಳಲ್ಲಿದ್ದ ಸ್ವಾಮಿಭೃತ್ಯ ಸಂಬಂಧವನ್ನು ವಚನಕಾರರು ಲಿಂಗ ನಿಷ್ಠೆಯಲ್ಲಿ ನಿರ್ಮಾಣ ಮಾಡುವ ಮೂಲಕ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ಮೌಲ್ಯವನ್ನು ಬದಲಾಯಿಸುತ್ತಾರೆ. ಇದು,

> **ಸ್ವಾಮಿ ಭೃತ್ಯ ಸಂಬಂಧಕ್ಕೆ ಆವುದು ಪಥವೆಂದರೆ**
> **ದಿಟವ ನುಡಿವುದು, ನುಡಿದಂತೆ ನಡೆವುದು**
> **ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲಸಂಗಮದೇವಾ**[32]

ಎಂದು ಬಸವಣ್ಣನವರು ಹೇಳಿರುವುದನ್ನು ಗಮನಿಸಬಹುದು. ಇಲ್ಲಿ ಲಿಂಗವನ್ನು ಸ್ವಾಮಿ ಒಡೆಯ ಎಂದು ಸಂಬೋಧಿಸಿ ರಾಜನಿಗೆ, ಒಡೆಯನಿಗೆ ನೀಡುವ ಸೇವೆಯನ್ನು ಲಿಂಗ ಭೃತ್ಯು ಸಂಬಂಧದಲ್ಲಿ ನೀಡಬೇಕೆಂದಿದ್ದಾರೆ. ವಚನಕಾರರು ಇಂತಹ ಮಾತುಗಳನ್ನು ಹೇಳುವಲ್ಲಿ ಅವರು ದೇವರ ಮೇಲೆ ನಂಬಿಕೆ ಹೊಂದಿ ರಾಜನು ಸರ್ವದಾನಿಯಲ್ಲ ಭಗವಂತ ಸರ್ವದಾನಿ. ಈ ಲೋಕದ ಎಲ್ಲವು ಭಗವಂತನು ಕೊಟ್ಟ ಕೊಡುಗೆ ಎನ್ನುವ ನೆಲೆಯಲ್ಲಿ ರಾಜ ವ್ಯವಸ್ಥೆಯನ್ನು ಧಿಕ್ಕರಿಸುತ್ತಾರೆ. ಜನತೆಗೆ ತಮ್ಮ ವಚನಗಳ ಮೂಲಕ ಇಂತಹ ಸಂದೇಶಗಳನ್ನು ಪ್ರಸಾರ ಮಾಡುತ್ತಾರೆ. ಜೋಳವಾಳಿತನದಲ್ಲಿ ನಡೆಯುವ ಮರಣ ಸಂಪ್ರದಾಯವನ್ನು ವಿರೋಧಿಸುವ ವಚನಕಾರರು ಜೋಳದ ಕರ್ತೃ ಒಡೆಯ, ಭಗವಂತ ಎಂದು ಭಾವಿಸುತ್ತಾರೆ. ತಾವೇನಾದರೂ ದೇಹತ್ಯಾಗ, ಪ್ರಾಣತ್ಯಾಗ ಮಾಡುವುದಿದ್ದರೆ ಅದು ಲಿಂಗಕ್ಕೆ ನೆಡೆಯಬೇಕು ಎಂದು ತಿಳಿಸುತ್ತಾರೆ. ಆಳ್ತನದಲ್ಲಿ ನೆಡೆಯುವ ಜೋಳವಾಳಿಯನ್ನು ವಿರೋಧಿಸುವ ಬಸವಣ್ಣನವರು.[33] **'ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯ!** ಎಂದು ಲಿಂಗಧರ್ಮ ನಿಷ್ಠೆಯಲ್ಲಿ ಲಿಂಗ ಧರ್ಮದ ಅಸ್ತಿತ್ವವನ್ನು ಉಳಿಸುವ ಸಂದರ್ಭದಲ್ಲಿ ಹೋರಾಟ ಮಾಡಿ ಮಹಾನವಮಿಯ ಸಂಭ್ರಮದಲ್ಲಿ ಮಡಿಯುವುದನ್ನು ವಚನಕಾರರು ಪ್ರೋತ್ಸಾಹಿಸಿದಂತೆ ಕಾಣುತ್ತದೆ. ವಚನಕಾರರು ಲಿಂಗವನ್ನು ಜೋಳದೊಡೆಯ ಎಂದು ಪರಿಭಾವಿಸಿ ಲಿಂಗಕ್ಕೆ ಜೋಳವಾಳಿತನದಲ್ಲಿ ನಡೆದುಕೊಳ್ಳುವಂತೆ ಸೂಚಿಸಿದ್ದಾರೆ. ಬಸವಣ್ಣನವರು[34] ತಮ್ಮ ಇನ್ನೊಂದು ವಚನದಲ್ಲಿ–

> **ಒಡೆಯರುಳ್ಳಾವಿಂಗೆ ಕೇಡಿಲ್ಲ ಕಾಣಿರೋ**
> **ಊರೆನ್ನದೆ ಅಡವಿಯೆನ್ನದೆ ಆಳನರಸಿ ಬಹ ಆಳ್ದರುಂಟೆ!**
> **ಜೋಳವಾಳಿಂಗೆ ಬಿಜ್ಜಳಂಗೆ ಆಳಾದರೇನು?**
> **ವೇಳೆವಾಳಿಂಗೆ ಕೂಡಿಕೊಂಡಿಪ್ಪ ಕೂಡಲಸಂಗಮದೇವ!**

ಎಂದು ಬಿಜ್ಜಳನ ಜೋಳವಾಳಿತನವನ್ನು ತಿರಸ್ಕರಿಸಿ ಲಿಂಗಕ್ಕೆ ವೇಳೆವಾಳಿತನದಲ್ಲಿ ಕೂಡಿಕೊಳ್ಳುವ ನಡೆದುಕೊಳ್ಳುವ ಸಂಪ್ರದಾಯವನ್ನು ಈ ಮೂಲಕ ಹೇಳಿದ್ದಾರೆ.

**ವೇಳೆವಾಳಿ ಮರಣ**

ವೇಳೆವಾಳಿ ಲೌಕಿಕ ಆತ್ಮ ಬಲಿದಾನವಾಗಿದೆ. ಈ ಪದ್ಧತಿಯಲ್ಲಿ ವೇಳೆವಾಳಿಗಳು ತನ್ನ ಒಡೆಯ ಮಡಿದರೆ ತಾವು ಮಡಿಯುವುದಾಗಿ ಪ್ರತಿಜ್ಞೆ ಕೈಗೊಳ್ಳುತ್ತಿದ್ದರು. ಇದು ರಾಜ ವ್ಯವಸ್ಥೆಯ ಆಳ್ವನದಲ್ಲಿ ನಡೆಯುವ ಆಚರಣೆಯಾಗಿದ್ದು ರಾಜನಿಷ್ಟೆಗೆ ವೀರನೊಬ್ಬ ಮಡಿಯುವ ಪದ್ಧತಿಯಾಗಿದೆ. ಈ ಪದ್ಧತಿಯಲ್ಲಿ ಒಡೆಯನ ಮೇಲಿನ ಪ್ರೀತಿಯಿಂದ ಅವನಿಗೆ ಸಂಕಷ್ಟ ಬಂದಾಗ ಅವನೊಂದಿಗೆ ಹೋರಾಡುತ್ತಾ ಹೂಳಿಸಿಕೊಂಡು ಸುಡಿಸಿಕೊಂಡು ಮಡಿಯುವ ಬಲಿದಾನವಾಗಿದೆ. ಇದು ಹಿಂದಿನ ಕಾಲದಲ್ಲಿ 'ಕೀಟ್ಗುಂಟೆ' ಎಂಬ ಹೆಸರಿನಲ್ಲಿಯೂ ಪ್ರಚಲಿತವಾಗಿದ್ದಿತು. ಮಧ್ಯಕಾಲೀನ ಸಂದರ್ಭದಲ್ಲಿ ವಚನಕಾರರು ವೈಚಾರಿಕವಾಗಿ ದುಡಿಯುವ ವರ್ಗದವರ ಪರವಾಗಿ ಆಲೋಚನೆ ಮಾಡುತ್ತಾ ರಾಜವ್ಯವಸ್ಥೆಯ ಊಳಿಗದಲ್ಲಿ ನಡೆಯುವ ಇಂತಹ ಅನಿಷ್ಟ ಪದ್ಧತಿಗಳನ್ನು ವಿರೋಧಿಸಿ ಅವುಗಳ ವಿರುದ್ಧ ತೀಕ್ಷ್ಣ ಪ್ರತಿಕ್ರಿಯೆ ನೀಡಿದರು. ಈ ಮೂಲಕ ರಾಜ ವ್ಯವಸ್ಥೆಯಲ್ಲಿ ಸೈನಿಕರಿಗೆ, ವೀರರಿಗೆ ಶೋಷಣೆಯ ಮೂಲಕ ಮಾಡುವ ಅನ್ಯಾಯವನ್ನು ಬಹಿರಂಗಪಡಿಸಿದರು. ಅಂತಹ ವ್ಯವಸ್ಥೆಯ ವಿರುದ್ಧ ದನಿಯೆತ್ತಿ ಮಾತನಾಡಿದರು. ರಾಜನು ತನ್ನ ವ್ಯವಸ್ಥೆಯಲ್ಲಿ ಸಾಮಾನ್ಯ ಜನರಿಗೆ ಮಾಡುವ ಶೋಷಣೆಯನ್ನು ಈ ಮೂಲಕ ತಪ್ಪಿಸಿದರು. ವಚನಕಾರರು ವೇಳೆವಾಳಿತನದ ಇಂತಹ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡುತ್ತಾ ವಿರೋಧಿಸಿದರು. ಸ್ವತಃ ಬಸವಣ್ಣನವರು[35]

**ಕಾಂಚನವೆಂಬ ನಾಯಿ ನೆಚ್ಚಿ**
**ನಿಮ್ಮ ನಾನು ಮರೆದೆನಯ್ಯ**
**ಕಾಂಚನಕ್ಕೆ ವೇಳೆಯಲ್ಲದೆ, ಲಿಂಗಕ್ಕೆ ವೇಳೆಯಿಲ್ಲ!**

ಎಂದು ಹೇಳುವ ಮೂಲಕ ರಾಜ ನಿಷ್ಟೆಯಲ್ಲಿ ವೇಳೆವಾಳಿತನ ನಡೆಸಿಕೊಳ್ಳುವ ಬಗ್ಗೆ ಆಲೋಚನೆ ಮಾಡುತ್ತಾರೆ. ಹಿಂದಿನ ಕಾಲದಲ್ಲಿ ಲಿಂಗವನ್ನು ಮರೆತು ಹಣವೆಂಬ ನಾಯ ನೆಚ್ಚಿಕೊಂಡು ಅರಸರು ನೀಡುವ ಸಂಬಳ, ಹಣ ಹೊನ್ನಿನ ರೂಪದ ಸಂಪತ್ತಿಗಾಗಿ ವೇಳೆವಾಳಿತನದಲ್ಲಿ ಪ್ರಾಣತ್ಯಾಗ ಮಾಡಿಕೊಂಡು ಬಂದ ವೀರ ಸೈನಿಕರ ಬಲಿದಾನ ಮರಣಗಳನ್ನು ವಚನಕಾರರು ವಿರೋಧಿಸುತ್ತಾರೆ. ಇಷ್ಟಲಿಂಗಕ್ಕೆ ವೇಳೆವಾಳಿಯಾಗಿ ನಡೆದುಕೊಳ್ಳುವ ಹೊಸ ಸಂಪ್ರದಾಯವನ್ನು ವಚನಕಾರರು ನಿರ್ಮಾಣ ಮಾಡುತ್ತಾರೆ. ಸ್ವತಃ ಬಸವಣ್ಣನವರು ತಮ್ಮ ವಚನದಲ್ಲಿ ಮೂಲಭೂತವಾದ ವೇಳೆವಾಳಿತನವನ್ನು ವಿರೋಧಿಸಿ ಈ ಮೇಲೆ ಹೇಳಿದ ಲಿಂಗ ನಿಷ್ಟೆಯ ವೇಳೆವಾಳಿತನವನ್ನು ಒಪ್ಪಿಕೊಳ್ಳುವಂತೆ **'ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯ'**[36] ಎಂದು ಹೇಳುವ ಮೂಲಕ ಇಷ್ಟಲಿಂಗಕ್ಕೆ ವೇಳೆವಾಳಿಯಾಗಿ ನಡೆದುಕೊಂಡು ಬದುಕನ್ನು ಉದ್ಧಾರ ಮಾಡಿಕೊಳ್ಳುವ ಸೂತ್ರವನ್ನು ಹೇಳುತ್ತಾರೆ. ರಾಜವ್ಯವಸ್ಥೆಯಲ್ಲಿ ಶೋಷಣೆಯ ರೂಪದಲ್ಲಿ ನಡೆಯುವ ಜೀವಹಾನಿಯನ್ನು ಈ ಮೂಲಕ ವಿರೋಧಿಸುತ್ತಾರೆ. ಬಸವಣ್ಣನವರು[37] ಇದನ್ನೇ ಇನ್ನೊಂದು ವಚನದಲ್ಲಿ **'ಜೋಳವಾಳಿಂಗೆ ಬಿಜ್ಜಳಂಗೆ ಆಳಾದರೇನು?,ವೇಳೆವಾಳಿಂಗೆ ಕೂಡಿಕೊಂಡಿಪ್ಪ ಕೂಡಲಸಂಗಮದೇವಾ!'**ಎಂದು ಬಿಜ್ಜಳನ ಆಸ್ಥಾನದಲ್ಲಿ ಜೋಳವಾಳಿತನದಲ್ಲಿ ಬದುಕುವ ಆದರ್ಶದಿಂದ ಹೊರಬಂದು ಲಿಂಗಕ್ಕೆ ವೇಳೆವಾಳಿಯಾಗಿ ಕೂಡಿಕೊಂಡು ಬದುಕುವ ಬಗೆಯಲ್ಲಿ ಹಳೆಯ ಆದರ್ಶವನ್ನು ಮುರಿದು ಇನ್ನೊಂದು ಹೊಸ ಆದರ್ಶವನ್ನು ನಿರ್ಮಾಣ ಮಾಡಿದ್ದಾರೆ.

**ಲೆಂಕವಾಳಿ ಮರಣ**

ಹಿಂದಿನ ಕಾಲದಲ್ಲಿ ರಾಜವ್ಯವಸ್ಥೆಯ ಊಳಿಗದಲ್ಲಿ ಜೋಳವಾಳಿ, ವೇಳೆವಾಳಿ ಸಂಪ್ರದಾಯಗಳಂತೆ ನಡೆದುಕೊಂಡು ಬಂದ ಇನ್ನೊಂದು ಮರಣ ಪದ್ಧತಿ 'ಲೆಂಕವಾಳಿ'ಯಾಗಿದೆ. ಇದು ರಾಜನಿಷ್ಟೆಯ ಸೇವಕತನದಲ್ಲಿ ನಡೆದುಕೊಂಡು ಬಂದ ಆಚರಣೆಯಾಗಿದ್ದು ಲೆಂಕ–ಅಂಕ ಎಂಬ ಪರಿಭಾಷೆಯಲ್ಲಿ ಸಂಬಂಧ ಹೊಂದಿದೆ. ಪ್ರಾಚೀನ ಕಾಲ ಮತ್ತು ಮಧ್ಯಕಾಲೀನ ಸಾಹಿತ್ಯಗಳಲ್ಲಿ ಈ ಪರಿಭಾಷೆ ಕಂಡು ಬಂದಿದೆ. ಪ್ರಾಚೀನ ಸಾಹಿತ್ಯ ಕೃತಿಗಳು 'ಲೆಂಕ' ಎಂಬುದಕ್ಕೆ 'ಸೈನಿಕ' 'ವೀರಸೈನಿಕ' ಎಂಬ ಅರ್ಥವನ್ನು ಹೇಳಿದ್ದು ವೀರರಾದ ಸೈನಿಕರು ಅರಸನಿಗಾಗಿ ಹೋರಾಡಿ ಪ್ರಾಣಾರ್ಪಣೆ ಮಾಡಿಕೊಳ್ಳುವ ಸಂಪ್ರದಾಯವಾಗಿದೆ. ಇದು ರಾಜವ್ಯವಸ್ಥೆಯ ಜೋಳವಾಳಿ, ವೇಳೆವಾಳಿ, ಸಂಪ್ರದಾಯಗಳ ಮುಂದುವರೆದ ಭಾಗವಾಗಿ 'ಲೆಂಕವಾಳಿ'ಯಾಗಿ ನಡೆದುಕೊಂಡು ಬಂದಂತೆ ಕಾಣುತ್ತದೆ. ಪ್ರಾಚೀನ ಕಾಲದಲ್ಲಿ ರಾಜನ ಪರವಾಗಿ ಹೋರಾಟ ಮಾಡಲು 'ಲೆಂಕವಾಳಿ'ಗಳ ಒಂದು ಪಡೆ ಇದ್ದುದ್ದನ್ನು ಕಾವ್ಯಗಳು ತಿಳಿಸುತ್ತವೆ. ಇಂತಹ ಅನೇಕ ಲೆಂಕವಾಳಿ ವೀರರು ರಾಜನ ಪರವಾಗಿ ಹೋರಾಡಿ ವೀರ ಮರಣ ಪಡೆಯುತ್ತಿದ್ದರು. ರಾಜವ್ಯವಸ್ಥೆಯ ಸ್ವಾರ್ಥದಿಂದ ಇಂತಹ ಅನೇಕ ಸಂಪ್ರದಾಯಗಳು ಕರ್ನಾಟಕದಲ್ಲಿ ಹಿಂದಿನಿಂದಲು ನಡೆದುಕೊಂಡು ಬಂದಿವೆ.

ಕರ್ನಾಟಕದಲ್ಲಿ ವೀರರ ವೀರಗಲ್ಲುಗಳು, ಸಮಾಧಿಗಳು ಬಹು ಹಿಂದಿನ ಕಾಲದಿಂದಲು ನಡೆದುಕೊಂಡು ಬಂದ ವೀರರ ಪ್ರಾಣ ಹಾನಿಯನ್ನು ತಿಳಿಸುತ್ತವೆ. ವಚನಕಾರರು ರಾಜನ ಸ್ವಾರ್ಥದ ಕಾರಣದಿಂದ ನಡೆಯುವ ಇಂತಹ ಜೀವಹತ್ಯೆಗಳನ್ನು ವಿರೋಧಿಸುವ ಮೂಲಕ ಪ್ರತಿಕ್ರಿಯೆ ನೀಡುತ್ತಾರೆ. ಸ್ವತಃ ಬಸವಣ್ಣನವರು[38]

**ಓಡುವಾತ ಲೆಂಕನಲ್ಲ ಬೇಡುವಾತ ಭಕ್ತನಲ್ಲ!**
**ಓಡಲಾಗದು ಲೆಂಕನು ಬೇಡಲಾಗದು ಲೆಂಕನು!**
**ಓಡೆನಯ್ಯ, ಬೇಡೆನಯ್ಯ ಕೂಡಲಸಂಗಮದೇವಾ**

ಎನ್ನುವ ಮೂಲಕ ಲೆಂಕತನ ನೆಡೆಸಿಕೊಳ್ಳುವ ವೀರಸೈನಿಕರ ಪರಾಕ್ರಮವನ್ನು ಹೇಳಿದರು 'ಓಡೆನಯ್ಯ' 'ಬೇಡೆನಯ್ಯ' ಎಂದು ಹೇಳುವ ಮೂಲಕ ಈ ಪದ್ಧತಿಯನ್ನು ತಿರಸ್ಕರಿಸುವುದನ್ನು ಕಾಣುತ್ತೇವೆ. ವಚನಕಾರರು ರಾಜಾಶ್ರಿತವಾಗಿ ನಡೆದುಕೊಂಡು ಬಂದ ಇಂತಹ ಸಂಪ್ರದಾಯಗಳನ್ನು ಮುರಿದು ಹಾಕುವ ಮೂಲಕ ಭಕ್ತರಿಗೆ ಇಂತಹ ಆಚರಣೆಗಳಲ್ಲಿ ಜೀವಹಾನಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡದೆ ಸೃಷ್ಟಿಯ ನಿಯಮದಲ್ಲಿ ಪ್ರಾಣದ ಮಹತ್ವವನ್ನು ಇಂತಹ ವೈಚಾರಿಕ ವಿಚಾರಧಾರೆಗಳ ಮೂಲಕ ಪ್ರಸ್ತಾಪಿಸಿದರು. ಅಲ್ಲಮನಂತಹ ಸಾತ್ವಿಕ ವ್ಯಕ್ತಿ, ಅನುಭಾವಿ ರಾಜನಿಗೆ ಲೆಂಕನಾಗಿ ನಡೆದುಕೊಳ್ಳುವುದಕ್ಕಿಂತ ಗುರುವಿಗೆ, ಲಿಂಗಕ್ಕೆ ಭವದಲೆಂಕನಾಗಿ ನಡೆದುಕೊಳ್ಳುವ ಸಂಪ್ರದಾಯವನ್ನು ಹೇಳುತ್ತಾ

**ಉಪಚಾರದ ಗುರುವಿಂಗೆ ಉಪಚಾರದ ಶಿಷ್ಯ**
**ಉಪಚಾರದ ಲಿಂಗ, ಉಪಚಾರದ ಜಂಗಮ**
**ಉಪಚಾರದ ಪ್ರಸಾದವ ಕೊಂಡು, ಗುರುವಿಂಗೆ ಭವದ ಲೆಂಕನಾಗಿ**[39]

ಎಂದು ಲೌಕಿಕ ಆಚಾರಕ್ಕಿಂತ ಭಿನ್ನವಾದ ಧಾರ್ಮಿಕ ಆಚರಣೆಯನ್ನು ಭವದ ಲೆಂಕನಾಗಿ ಎಂಬ ಇನ್ನೊಂದು ಆಚಾರದಲ್ಲಿ ವಚನಕಾರರು ಚಿಂತನೆ ಮಾಡಿದ್ದಾರೆ.

**ಮಹಾಸತಿಮರಣ**

ಮಹಾಸತಿಮರಣವು ಪತಿಪತ್ನಿ ಸಂಬಂಧದ ಪಾವಿತ್ರತೆಯ ಮನೋಭಾವದಲ್ಲಿ ನಡೆಯುವಂತಹ ಆಚರಣೆಯಾಗಿದೆ. ಇದು ಗಂಡನು ಮರಣ ಹೊಂದಿದ ನಂತರ ಆತನ ಶವದೊಂದಿಗೆ ತಾನು ಜೀವಂತವಾಗಿ ಅಗ್ನಿ ಪ್ರವೇಶ ಮಾಡಿ ಮರಣ ಪಡೆಯುವುದು ಸಹಗಮನ ಮರಣವಾಗಿದೆ. ಕೆಲವು ಸಂದರ್ಭದಲ್ಲಿ ಗಂಡನ ಜೊತೆಗೆ ಸಾಯದೆ ಗಂಡ ದೂರದ ಸ್ಥಳದಲ್ಲಿ ಸತ್ತರೆ, ಅವನ ಶವ ಲಭ್ಯವಿಲ್ಲದಿದ್ದಾಗ ಅವನಿಗೆ ಸಂಬಂಧಿಸಿದ ಯಾವುದಾದರೊಂದು ವಸ್ತು ಬಂದರೆ ಅದನ್ನು ಗುರುತಿಸಿ ಸ್ಪಷ್ಟಪಡಿಸಿಕೊಳ್ಳುತ್ತಿದ್ದರು. ಆನಂತರ ಆ ವಸ್ತುವನ್ನು ಹಿಡಿದುಕೊಂಡು ಚಿತೆಯನ್ನು ಪ್ರವೇಶ ಮಾಡುವುದರ ಮೂಲಕ ಅವನ ಹೆಂಡತಿ ಮರಣವನ್ನು ಪಡೆಯುತ್ತಿದ್ದಳು. ಇಂತಹ ಮರಣವನ್ನು 'ಅನುಗಮನ' ಮರಣವೆಂದು ಕರೆಯಲಾಗುತ್ತಿತ್ತು. ಮಧ್ಯಕಾಲೀನ ಸಂದರ್ಭದಲ್ಲಿ ಮುಸ್ಲಿಂರ ದಾಳಿಗಳು ಭಾರತ ಮತ್ತು ಕರ್ನಾಟಕದ ಮೇಲೆ ಹೆಚ್ಚಾಗಿರುವುದರ ಕಾರಣವಾಗಿ ಸಹಗಮನ ಮರಣ ಹೆಚ್ಚು ನಡೆದಂತೆ ಕಾಣುತ್ತದೆ. ಇಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿ ಶಿವಶರಣರು ಸ್ತ್ರೀ ಆತ್ಮಗೌರವ ಅವಳ ಅಸ್ತಿತ್ವದ ಬಗ್ಗೆ ಕಾಳಜಿ ಹೊಂದಿ ವೈಚಾರಿಕವಾದ ಚಿಂತನೆಗಳನ್ನು ಮಾಡುವುದರ ಮೂಲಕ ಸಹಗಮನ ಮರಣವನ್ನು ವಿರೋಧಿಸಿರುವುದನ್ನು ಕಾಣುತ್ತೇವೆ. ಷಣ್ಮುಖಸ್ವಾಮಿ[40] ಎಂಬ ವಚನಕಾರ.

**ಗಂಡ ಸತ್ತನೆಂದು ಗಂಡನೊಡನೆ ಕೆಂಡವ ಬೀಳುವೆನೆಂದು**
**ಪುಂಡ ವೀರಸ್ತ್ರೀ ತಾನು ದಂಡೆಯ ಕಟ್ಟಿಕೊಂಡು ಖಂಡೆಯವ ಹಿಡಿದು**
**ತಂಡ ತಂಡದ ಜನರ ಮುಂದೆ ಮೆರೆದುಕೊಂಡು ಬಂದು**
**ಕಿಚ್ಚಿನ ಹೊಂಡವ ಕಂಡು ಹೆದರಿ ಹಿಮ್ಮೆಟ್ಟಿದರೆ**
**ಅವಳಿಗದೆ ಭಂಗವಲ್ಲದೆ ಶೃಂಗಾರ ಮೆರೆವುದೆ ಅಯ್ಯಾ?**
**ಪತಿಲಿಂಗ ಸತಿ ಶರಣ ತನ್ನ ಪತಿವ್ರತಾ ಭಾಷೆಯ ನುಡಿದು**
**ನಡೆಯಲ್ಲಿ ತಪ್ಪಿದಡೆ ಅವನ ಭಂಗಕ್ಕೆ ತುದಿ ಮೊದಲಿಲ್ಲ ನೋಡಾ ಅಖಂಡೇಶ್ವರಾ'**

ಎಂದು ಹೇಳುವ ಮೂಲಕ ಇಲ್ಲಿಯ ವಚನದಲ್ಲಿ ಮಾಸ್ತಿಯ ಧೈರ್ಯವನ್ನು ಉಪಮಾನವಾಗಿ ಬಳಸಿದ್ದರು. "ಲಂಡಸ್ತ್ರೀ", "ಪುಂಡಸ್ತ್ರೀ" ಎಂಬ ಮಾತುಗಳನ್ನು ವಚನಗಳ ಮೂಲಕ ಹೇಳುವಲ್ಲಿ ಸಹಗಮನ ಮರಣವನ್ನು ವಿರೋಧಿಸುತ್ತಾರೆ. ಮಹಾಸತಿ ಮರಣದ ಬಗ್ಗೆ ಬಹುತೇಕ ವಚನಕಾರರು ಇಂತಹ ನಿಲುವನ್ನು ತಾಳಿದ್ದಾರೆ. ಅದರಲ್ಲಿ ಬಸವಣ್ಣನವರು[41]

**ಮುನ್ನಿನ ಪುರುಷವ್ರತಿಯರು ಒಲಿಸಿದ ಆಯತವ**
**ಪರಿಪರಿಯಲು ಬಣ್ಣಿಸಲು ಬಹುದಲ್ಲದೆ**
**ಪುರುಷ ನಿರ್ವಾಣಕ್ಕುರಿವಗ್ನಿಯ ಬಂದು ಹೊಕ್ಕು ತೋರಲು ಬಾರದು**

ಎಂದು ಹೇಳುವ ಮೂಲಕ ಪತ್ನಿಯ ಸಾವಿಗಾಗಿ ಉರಿವ ಅಗ್ನಿಯನ್ನು ಸ್ತ್ರೀ ಪ್ರವೇಶಿಸಬಾರದೆಂದು ತಿರಸ್ಕಾರದಿಂದ ಹೇಳಿದ್ದಾರೆ. ಮಾದರ ಧೂಳಯ್ಯ[42] ಎಂಬ ವಚನಕಾರ ತನ್ನ ವಚನದಲ್ಲಿ

**ಧೀರೆಯಾದ ಮಾಸ್ತಿಗೆ ವೀರತ್ವವಲ್ಲದೆ**
**ಧಾರುಣಿಯ ಜನರೆಲ್ಲರೂ ಹೇಡಿ ಮಾಸ್ತಿ ಎಂಬ ಬಳಿಕ ವೀರತ್ವಯಲ್ಲಿದೋ?**
**ಧೀರೆಯಾದ ಮಾಸ್ತಿಯ, ವೀರರಾಗಿದ್ದವರು**
**ಮುಡಿಯಲರ ಪಿಡಿದ ಲಿಂಬೆಯ ಹಣ್ಣ ಬೇಡಿದಡೆ ಕೊಡುವಳು;**
**ದೃಢವುಳ್ಳ, ವೀರರು ತರುವರು;**
**ದೃಷ್ಟವ ನೋಡಿರಣ್ಣ, ಕೊಡುವಾಕೆ ದಹನವಾದಳು ಕೊಂಬಾತ ರೂಪಾದ**
**ಈತ ಬೇಡಿದ ಇಷ್ಟವ ಕೊಟ್ಟುತನುಯಾತವೊ**
**ಆತ್ಮನೋ ಬಲ್ಲಡೆ ನೀವು ಹೇಳಿರಣ್ಣ,**
**ನಿಮ್ಮ ಜ್ಞಾನದ ಮುಸುಕು ತಱೆದು ನಿಮ್ಮ ಬಲ್ಲವಂತಿಕೆಯ ಕಾಣಬಹುದು.**
**ಕಾಮಧೂಮ ಧೂಳೇಶ್ವರ ಲಿಂಗ ನಱೆವುದಕ್ಕೆ ಇದೆ ದೃಷ್ಟ"**

ಎಂದು ವಚನದಲ್ಲಿ ಮೇಲಿನ ಒಂದು ಭಾಗದಲ್ಲಿ ಮಾಸ್ತಿ ಮರಣ ಆಚರಣೆಯ ಸಂಪ್ರದಾಯಗಳನ್ನು ಹೇಳಲಾಗಿದೆ. ಈ ಭಾಗದಲ್ಲಿ ಜ್ಞಾನದ ಮುಸುಕ ತೆರೆಯುವ ಮೂಲಕ ಅಜ್ಞಾನವನ್ನು ದೂರಮಾಡಿ ಇಂತಹ ಮೂಢನಂಬಿಕೆಯ ಆಚರಣೆಗಳನ್ನು ದೂರ ಮಾಡಬೇಕೆಂದು ಹೇಳಲಾಗಿದೆ. ಕನ್ನಡದ ಮೊದಲ ಕವಿಯತ್ರಿಯಾದ ಅಕ್ಕಮಹಾದೇವಿ[43] ತನ್ನ ಒಂದು ವಚನದಲ್ಲಿ ಸಹಗಮನ ಮರಣ ವಿರೋಧಿಸುವ ಮೂಲಕ ಸ್ತ್ರೀಯ ಪರವಾದ ನಿಲುವನ್ನು **'ಕೊಂಡಕ್ಕೆ ಬೀಳ್ವಂತ ಲಂಡಸ್ತ್ರೀಯಳು ತಾನು।ದಂಡೆಯ ಕುಣಿಕೆ ಸಡಿಲಿಸಿ ಕೊಂಡದ।ಕೆಂಡದೊಳಾಳಿ ಮುಳುಗಿದಳು॥**ಎಂದು ಹೇಳುವ ಮೂಲಕ ಕೊಂಡಕ್ಕೆ ಬೀಳುವ ಸ್ತ್ರೀಯನ್ನು 'ಲಂಡಸ್ತ್ರೀ' ಎನ್ನುವಲ್ಲಿ ಸಹಗಮನ ಮರಣ ಸಂಪ್ರದಾಯವನ್ನು ವಿರೋಧಿಸಿರುವುದನ್ನು ಕಾಣುತ್ತೇವೆ.

**<u>ಅಡಿಟಿಪ್ಪಣಿಗಳು:–</u>**

1. ಶ್ರೀನಿವಾಸಮೂರ್ತಿ, ಎಂ.ಆರ್: ಸಂ. ವಚನಧರ್ಮಸಾರ, ಕ.ಸಾ.ಪ,.ಬೆಂಗಳೂರು, 2006, ಪು.146.
2. ಬಸವರಾಜು, ಎಲ್.: ಸಂ. ಬಸವಣ್ಣನವರ ವಚನಗಳು, ಗೀತಾ ಬುಕ್ ಹೌಸ್, ಮೈಸೂರು, 2008, ಪು.75, ವ.164.
3. ಅದೇ.ಪು.125, ವ.376.
4. ಅದೇ.ಪು.126, ವ.382.
5. ಅದೇ.ಪು.126, ವ.383.
6. ಅದೇ.ಪು.64, ವ.118.